# ಜಾಣ ಪತಂಗ



ಚಿತ್ರ: ವಿಜಯಕುಮಾರಿ

■ ತಯುಬಅಲಿ ಅ. ಹೊಂಬಳ

ಪತಂಗವು ನೋಡಲು ಎಷ್ಟು ಸುಂದರ ದೇಹಮುಟ್ಟಿದರೆ ಮಾಸಬೇಕು, ಸದಾ ಹೂ ಬನದಲ್ಲಿ ಇರುವ ಹೂವಿಗಿಂತಲೂ ಮೃದುವಾಗಿದೆ. ಒಂದು ದಿನ ಪತಂಗ ಹೂವಿನ ಮಧುವನ್ನು ಹೀರಿ ಸುಂದರ ಲೋಕವ್ಯವಹಾರಕ್ಕಾಗಿ ಹೊರಟಿತು. ನಾಡು, ದಾಟಿ ಸಾಗರದ ತೀರದಲ್ಲಿ ವಿಹರಿಸುತ್ತಿತ್ತು.

ಆಯಾಸವಾಗಿ ಒಂದು ಕಲ್ಲಿನ ಮೇಲೆ ಕುಳಿತಿತು. ಆದರೆ ಅದು ಕಲ್ಲಾಗಿರಲಿಲ್ಲ; ಕಲ್ಲಿನ ಬಣ್ಣದ ಆಮೆಯಾಗಿತ್ತು. ಆಮೆ ಕದಲಿದಾಗ ಹಾರಿದ ಪತಂಗವು ಹೆದರಿ ಬೇರೆ ಕಡೆ ಕುಳಿತಿತು. ಆಮೆ ಮುಂದೆ ನಡೆಯತೊಡಗಿತು. ಆಗ ಪತಂಗವು ಆ ಆಮೆಯ ಮೇಲೆ ಕುಳಿತುಕೊಳ್ಳಬೇಕೆಂದು ಕೂಡಲು ಹೋದಾಗ ಆಮೆ ಅಡ್ಡಡ್ಡವಾಗಿ ನಡೆಯತೊಡಗಿತು. ಆಗ ಪತಂಗ 'ಏ ಆಮೆಯಕ್ಕ ಹೀಗೇಕೆ ಅಡ್ಡಡ್ಡವಾಗಿ ನಡೆಯುವೆ? ನೇರವಾಗಿ ನಡೆಯಲು ಬರುವುದಿಲ್ಲವೆ?' ಎಂದು ಕೇಳಿತು. 'ನಾ ಹೇಗಾದರೂ ನಡೆಯುತ್ತೇನೆ ನಿನಗೇನು? ಎಲ್ಲರೂ ನೇರವಾಗಿ ನಡೆದರೆ, ನಾನು ಅಡ್ಡಡ್ಡವಾಗಿ ನಡೆಯುತ್ತೇನೆ. ನೀನು ಒಮ್ಮೆ ಅಡ್ಡಡ್ಡವಾಗಿ ಹಾರಿ ತೋರಿಸು' ಎಂದಿತು ಆಮೆ. 'ನೀನು ಹಾಗೆ ನಡೆದರೆ ನಿನ್ನ ಜೀವಕ್ಕೆ ಅಪಾಯ ಬರಬಹುದು' ಎಂದಿತು ಪತಂಗ.

'ನನಗೆ ಯಾರು ಏನೋ ಮಾಡಲು ಆಗುವುದಿಲ್ಲ' ಎಂದು ಏಡಿಯು ಮುಂದೆ ಅಡ್ಡಡ್ಡವಾಗಿ ನಡೆಯತೊಡಗಿತು. ಸಾಗರದ ತೀರದಲ್ಲಿ ಒಬ್ಬ ಕುದುರೆ ಸವಾರನು ವೇಗವಾಗಿ ಕುದುರೆಯನ್ನೇರಿ ಬರುತ್ತಿರುವುದು ನೋಡಿ, ಈ ಆಮೆ ಸತ್ತೇ ಹೋಗುತ್ತೆ, ನಾನು ರಕ್ಷಿಸಬೇಕೆಂದು ಪತಂಗವು ಶರವೇಗದಲ್ಲಿ ಬರುತ್ತಿದ್ದ ಕುದುರೆ ಸವಾರನ ಸಮನಾಗಿ ವೇಗವಾಗಿ ಹಾರತೊಡಗಿತು. ಕುದುರೆ ಸವಾರ ವೇಗವಾಗಿ ಸಾಗುತ್ತಿದ್ದ. ಆತ ಪತಂಗದ ವೇಗವನ್ನು ಗಮನಿಸುತ್ತಿದ್ದ ಕುದುರೆ ಸವಾರ. ಅದೇ ಸಮಯವೆಂದು ಪತಂಗವು ಅವನ ಗಮನವನ್ನು ತನ್ನಕಡೆ ಸೆಳೆದು ಸಾಗರ ತೀರದ ದಂಡೆಯ ಕಡೆಗೆ ಓಡುತ್ತ ಕುದುರೆಯ ದಾರಿಯನ್ನು ತಪ್ಪಿಸಿತು. ದೂರದಲ್ಲಿ ಅಪಾಯವನ್ನು ಗಮನಿಸುತ್ತಿದ್ದ ಆಮೆಯ ಮೈ ನಡುಗಿತು. ಹತ್ತಿರ ಬಂದ ಪತಂಗಕ್ಕೆ 'ನನ್ನನ್ನು ಕ್ಷಮಿಸಿ ಬಿಡು, ನಿನ್ನ ಮಾತು ಕೇಳಿಲಿಲ್ಲ. ನಾನು, ನಮ್ಮ ತಪ್ಪುಗಳು ಮತ್ತೊಬ್ಬರಿಗೆ ತಿಳಿಯುತ್ತದೆ. ಆಗ ಅವರ ಮಾತು ಕೇಳಬೇಕು ಅನ್ನುವುದು ನನಗೆ ಈಗ ಅರ್ಥವಾಗಿದೆ' ಎಂದು ಆಮೆ ಹೇಳಿತು. ■

# ಜ್ಞಾನವ ಅರಿಯಮ್ಮ

■ ಸಮುದ್ರವಳ್ಳಿ ವಾಸು

ಜಂಗಮವಾಣಿಯ ಜೋಕು ಬಿಟ್ಟು
ಜ್ಞಾನವ ಅರಿಯಮ್ಮ
ಜ್ಞಾನವ ಅರಿಯದೆ ಜಾಲಕೆ ಜಾರಿರೆ
ಮೌನದ ಕುರಿಯಮ್ಮ
ನಾ ಮೌನದ ಕುರಿಯಮ್ಮ

ವಾಟ್ಸಪ್, ಫೇಸ್ಬುಕ್ ಟ್ವಿಟ್ಟರ್ ಖಾತೆ
ಬಳಸುತ್ತೀಯಮ್ಮ
ವಾರೆಗಣ್ಣಿನ ನೋಟವ ಬೀರಿ
ಅಳಿಸುತ್ತೀಯಮ್ಮ
ನೀ.. ನನ್ನ ಅಳಿಸುತ್ತೀಯಮ್ಮ

ರಾಗಿ ರೊಟ್ಟಿ ಹುಚ್ಚೆಳ್ಳು ಚಟ್ನಿ
ಮರೆತೇ ಹೋಯ್ತಮ್ಮ
ರಾತ್ರಿ ಮುಕ್ಕಲು ಬೇಕರಿ ತಿನಿಸು
ಮನೆಗೆ ಬಂತಮ್ಮ
ತಪ್ಪದೆ ರೋಗ ತಂತಮ್ಮ

ಗೋಲಿ ಬುಗರಿ ಗಿಲ್ಲಿದಾಂಡು
ದಾರಿಲಿ ಇಲ್ಲಮ್ಮ
ಗೂಗಲ್‌ನಲ್ಲಿ ಗೂಳಿಯಾಟ
ಭಾರೀ ಇವೆಯಮ್ಮ
ನಮಗೆ ಭಾರೀ ಇವೆಯಮ್ಮ

ಸುಂದರ ಬಾಳನು ಬಾಳಲು ನಮಗೆ
ಕೋಟಿ ಬ್ಯಾಡಮ್ಮ
ಹಂದರವಾದ ಬಾಳನು ಬೆಳಗಲು
ಮೇಟಿ ಸಾಕಮ್ಮ
ಜ್ಞಾನದ ಮೇಟಿ ಸಾಕಮ್ಮ ■



ಚಿತ್ರ: ಮಂಜುನಾಥ ಹುಲುಕೊಪ್ಪದ್